ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 5860
ಸದಸ್ಯರ ಹೆಸರು : ಶ್ರೀ ಹೆಚ್.ಡಿ.ಬಸವರಾಜ್ (ವಿರಾಜಪೇಟೆ)
ಉತ್ತರಿಸುವ ದಿನಾಂಕ : 19.07.2005
ಉತ್ತರಿಸುವ ಸಚಿವರು : ಮುಖ್ಯಮಂತ್ರಿಗಳು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ.	ಕೊಡಗು ಜಿಲ್ಲೆ ವಿರಾಜಪೇಟೆ ತಾಲೂಕು ಗೋಣಿಕೊಪ್ಪ ಗ್ರಾಮದಲ್ಲಿ ಅಗ್ನಿ ಶಾಮಕ ಠಾಣೆ ಮಂಜೂರಾತಿ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆಯೇ?	ಹೌದು
ಆ.	ಸರ್ಕಾರಕ್ಕೆ ಪ್ರಸ್ತಾವನೆ ಬಂದಿದ್ದು ಯಾವಾಗ?	ದಿನಾಂಕ: 20.7.2002ರಂದು ಆದರೆ ಪರಿಷ್ಕೃತ ಪ್ರಸ್ತಾವನೆಯು ದಿನಾಂಕ 16.2.2005ರಂದು ಅಗ್ನಿ ಶಾಮಕ ನಿರ್ದೇಶಕರಿಂದ ಸರ್ಕಾರಕ್ಕೆ ಬಂದಿರುತ್ತದೆ.
ಇ. ಈ	ಅಗ್ನಿಶಾಮಕ ಠಾಣೆ ಮಂಜೂರಾತಿ ಪ್ರಕ್ರಿಯೆಯು ಯಾವ ಹಂತದಲ್ಲಿದೆ? ಆರ್ಥಿಕ ಇಲಾಖೆಯಿಂದ ಮಂಜೂರಾತಿ ದೊರೆತರೂ ಸಹ ಇದುವರೆಗೂ ಅಗ್ನಿ ಶಾಮಕ ಠಾಣೆ ಮಂಜೂರು ಮಾಡದಿರಲು ಕಾರಣಗಳೇನು?	ಸರ್ಕಾರದ ಆದೇಶ ಸಂ:ಒಇ 135 ಕಅಸೇ 2004 ದಿನಾಂಕ 14.7.2005ರಂದು ಕೊಡಗು ಜಿಲ್ಲೆ ವಿರಾಜಪೇಟೆ ತಾಲೂಕು ಗೋಣಿಕೊಪ್ಪ ಗ್ರಾಮದಲ್ಲಿ ಅಗ್ನಿಶಾಮಕ ಠಾಣೆಯ ಮಂಜುರಾತಿ ಆದೇಶವನ್ನು ಹೊರಡಿಸಲಾಗಿದೆ.

ಶ್ರೀ ಹೆಚ್.ಡಿ.ಬಸವರಾಜ್:– ಮಾನ್ಯ ಅಧ್ಯಕ್ಷರೆ, ಇವತ್ತು ಕೊಡಗು ಜಿಲ್ಲೆ ವಿರಾಜಪೇಟೆ ತಾಲೂಕಿನ ಗೋಣಿಕೊಪ್ಪ ಗ್ರಾಮದಲ್ಲಿ ಅಗ್ನಿಶಾಮಕ ಠಾಣೆಯನ್ನು ಪ್ರಾರಂಭ ಮಾಡುವುದಕ್ಕೆ ಮಂಜೂರಾತಿಯನ್ನು ಈ ಒಂದು ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿದಂತಹ ಸಂದರ್ಭದಲ್ಲಿ ಅವರು ಮಂಜೂರಾತಿ ಕೊಟ್ಟಿದ್ದಾರೆ. ಅದಕ್ಕೆ ಧನ್ಯವಾದಗಳನ್ನು ಕೂಡ ಹೇಳುತ್ತಿದ್ದೇನೆ. ಆದರೆ ಇದಕ್ಕೆ ಎಷ್ಟು ಹಣ ಮಂಜೂರಾಗಿದೆ? ಮತ್ತೆ ಈ ಕಾಮಗಾರಿಯನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ಎನ್ನುವುದನ್ನು ತಿಳಿಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳುತ್ತೇನೆ.

ಶ್ರೀ ಎಸ್.ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಗಳು):– ಈ ಕಾಮಗಾರಿಗೆ ಒಂದು ಕೋಟಿ 50ಲಕ್ಷ ರೂಪಾಯಿ ಮಂಜೂರು ಮಾಡಲಾಗಿದೆ. ಈಗ ಕೆಲಸ ಪ್ರಾರಂಭ ಮಾಡಿ ಮುಗಿಸುತ್ತೇವೆ.

ಶ್ರೀ ಹೆಚ್.ಡಿ.ಬಸವರಾಜ್:– ಮಾನ್ಯ ಅಧ್ಯಕ್ಷರೆ, ಹಣವನ್ನು ಕೊಟ್ಟಿರುವುದನ್ನು ಕೂಡ ಹೇಳಿದ್ದೀರಿ. ಈಗ ನಾನು ಒಂದು ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಕಾಮಗಾರಿಯನ್ನು ಪ್ರಾರಂಭ ಮಾಡಬೇಕು ಎಂದರೆ ಅಗತ್ಯವಾದಂತಹ ಭೂಮಿ ತಮಗೆ ದೊರಕಿದೆಯಾ? ಸರ್ಕಾರಿ ಭೂಮಿಯೇ ಆಗಲೀ ಖಾಸಗಿ ಭೂಮಿಯೇ ಆಗಲಿ ದೊರಕಿದೆಯಾ? ಅದರ ಬಗ್ಗೆ ಏನಾದರೂ ಕ್ರಮ ಕೈಗೊಂಡಿದ್ದಿರಾ? ಏಕೆಂದರೆ, ಕಾಮಗಾರಿ ಪ್ರಾರಂಭ ಮಾಡಬೇಕು ಎಂದರೆ ಅಗತ್ಯ ಭೂಮಿಯ ಬಗ್ಗೆ ಪರಿಶೀಲನೆ ಆಗಿದೆಯಾ? ಪರಿಶೀಲನೆ ಆಗಿತ್ತು ಅಂದರೆ ಅದು ಖಾಸಗಿ ಭೂಮಿಯೋ ಅಥವಾ ಸರ್ಕಾರಿ ಭೂಮಿನೋ? ದಯವಿಟ್ಟು ಹೇಳಿ ಮತ್ತು ಎರಡನೆಯದಾಗಿ ಈಗ ನೀವು ಪ್ರಾರಂಭ ಮಾಡುತ್ತೀನಿ ಎಂದು ಹೇಳಿದಿರಿ. ಪ್ರಾರಂಭ ಮಾಡಿದ ಮೇಲೆ ಸಂತೋಷ ಪೂರ್ಣಗೊಳಿಸುವುದನ್ನು ಸಹ ಅವರು ಟೆಂಡರ್‌ನಲ್ಲಿ ಫಿಕ್ಸ್ ಮಾಡಬೇಕಾಗುತ್ತದೆ. ಅದನ್ನು ಯಾವಾಗ ಮುಗಿಸುತ್ತೀರಿ ?

ಶ್ರೀ ಧರ್ಮಸಿಂಗ್:– ಮಾನ್ಯ ಬಸವರಾಜ್ ಅವರು ಕ್ವೆಶ್ಚನ್ ಮೊದಲು ಹಾಕಿದ್ದರು. ನಾವು 14 ಜಿಲ್ಲೆಗೆ ಕೂಡ ಮಂಜೂರಾತಿಯನ್ನು ಕೊಟ್ಟಿದ್ದೇವೆ. ಒಂದೂವರೆ ಕೋಟಿ ರೂಪಾಯಿ ಖರ್ಚಾಗುತ್ತದೆ. ಅದು ಸರ್ಕಾರಿ ಜಮೀನೋ ಖಾಸಗಿ ಜಮೀನೋ, ನಮ್ಮ ಅಧಿಕಾರಿಗಳು ಇದ್ದಾರೆ. ನಿಗದಿ ಮಾಡಿ ಕ್ರಮ ತೆಗೆದುಕೊಳ್ಳುತ್ತಾರೆ. ನಿವೇಕೆ ಫಿಲ್ ಮಾಡಿ ಕೊಳ್ಳುತ್ತೀರಿ? ಅದರ ಬಗ್ಗೆ ಯಾವುದೇ ಜಮೀನು ಆಗಲಿ, ಅದನ್ನು ವಶಪಡಿಸಿಕೊಂಡು ಕೆಲಸ ಪ್ರಾರಂಭ ಮಾಡಿ ಮುಗಿಸುತ್ತೇವೆ.

ಶ್ರೀ ಹೆಚ್.ಡಿ.ಬಸವರಾಜ್:– ನಮ್ಮ ಕಾಳಜಿ ಏನೆಂದರೆ ಅವರು ಕ್ರಮ ಮಾಡುತ್ತಾರೆ. ಇಲ್ಲ ಎಂದು ಹೇಳುವುದಿಲ್ಲ. ಆದರೆ ತಾವು ಸೂಕ್ತವಾದಂತಹ ಆದೇಶವನ್ನು ಕೊಡಬೇಕು. ಏಕೆಂದರೆ, ಜಮೀನು ಲಭ್ಯತೆಯಿಲ್ಲ ಎಂದು ಅವರು ಅದನ್ನು ಮುಂದಕ್ಕೆ ಹಾಕಿತು ಎಂದರೆ ತುಂಬಾ ತೊಂದರೆ ಆಗುತ್ತದೆ. ಆ ದೃಷ್ಟಿಯಿಂದ ಅವರು ಅಗತ್ಯ ಕ್ರಮಕೈಗೊಳ್ಳುತ್ತಾರೆ ಎಂದು ತಾವು ಹೇಳುವಂತಹದನ್ನು ಮಾಡಬೇಕು.